**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.185/2020

**PW**. 13

**CW**. 20

**ಸಾಕ್ಷಿಯ ಹೆಸರು – ಹೆಚ್.ಎನ್.ಬಾಲಕೃಷ್ಣ**

**ತಂದೆಯ ಹೆಸರು – ನಂಜುಂಡಿ**

**ವಯಸ್ಸು – 45 ವರ್ಷಗಳು** ದಿನಾಂಕ 29.12.2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ – ಪಿ.ಐ. ಮಂಗಳೂರು ನಗರ ಪೋಲಿಸ್ ಠಾಣೆ**

**ವಾಸಸ್ಥಳ – ಮಂಗಳೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

**The evidence of witness i.e., CW20 is recorded through Video conference, In the presence of Public prosecutor, Accused, Advocate for accused.**

ನಾನು 2013 ರಿಂದ ಜುಲೈ 2016 ರವರೆಗೆ ಹೆಚ್.ಡಿ ಕೋಟೆ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ27.04.2016 ರಂದು ನಾನು ಠಾಣಾ ಕರ್ತವ್ಯ ದಲ್ಲಿ ಇದ್ದಾಗ ಬೆಳಿಗ್ಗೆ 8.30 ಗಂಟೆಗೆ ಚಾಸಾ 1 ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ 89/2016 ರಂತೆ ಪ್ರಕರಣ ದಾಖಲು ಮಾಡಿಕೊಂಡು ಪ್ರ,ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ದೂರನ್ನು ಈಗಾಗಲೇ ನಿಪಿ–1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ–11 ಎಂದು, ಸಾಕ್ಷಿಯ ಸಹಿಯನ್ನು ನಿಪಿ–11(ಎ) ಎಂದು ಗುರತಿಸಲಾಯಿತು.

ಅದೇ ದಿನ ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ಬೆಳಿಗ್ಗೆ 9.30 ರಿಂದ 12 ಗಂಟೆಯವರೆಗೆ ಮೃತ ದಾಸಶೆಟ್ಟಿ ರವರ ಶವಪಂಚನಾಮೆಯನ್ನು ಚಾಸಾ 3 ರಿಂದ 5 ರವರ ಸಮಕ್ಷಮ ಮಾಡಿರುತ್ತೇನೆ. ಅದನ್ನು ಈಗಾಗಲೇ ನಿಪಿ–3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–3(ಸಿ) ಎಂದು ಗುರುತಿಸಲಾಯಿತು. ನಂತರ ಶವವನ್ನು ವೈದ್ಯರಿಗೆ ಕಳುಹಿಸಿಕೊಟ್ಟು, ಮರಣೋತ್ತರ

ಪರೀಕ್ಷೆಮಾಡಲು ಕೋರಿಕೊಂಡಿರುತ್ತೇನೆ. ಚಾಸಾ 2 ಮತ್ತು 4 ರವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ಮರಣೋತ್ತರ ಪರೀಕ್ಷೆ ಮುಗಿದ ನಂತರ ಶವವನ್ನು ಅವರ ವಾರಸುದಾರರ ವಶಕ್ಕೆ ನೀಡಿದ್ದೇನೆ. ಅದೇ ದಿನ ಸಂಜೆ 5.30 ರಿಂದ 6.40 ರವರೆಗೆ ಚಾಸಾ 2, 3 ಮತ್ತು 5 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿದ್ದೇನೆ. ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಡಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ 1 ರವರ ಮರುಹೇಳಿಕೆಯನ್ನು ಪಡೆದಿದ್ದೇನೆ.

ದಿಃ 29.04.2016 ರಂದು ಚಾಸಾ 8, 10 ರಿಂದ 13 ರವರ ಹೇಳಿಕೆ ಪಡೆದಿರುತ್ತೇನೆ. ದಿಃ03.05.2016 ರಂದು ನಮ್ಮ ಸಿಬ್ಬಂದಿ ಮೃತನ ಮೈಮೇಲಿನ ಬಟ್ಟೆಗಳನ್ನು ವೈದ್ಯರಿಂದ ಸಂಗ್ರಹಿಸಿ ನನ್ನ ಮುಂದೆ ಹಾಜರು ಮಾಡಿದ್ದು, ಅವುಗಳನ್ನು ಜಪ್ತಿ ಮಾಡಿ, ಚಾಸಾ 3 ಮತ್ತು 6 ರವರ ಸಮಕ್ಷಮ 6.30 ರಿಂದ 7.15 ರವರೆಗೆ ಪಂಚನಾಮೆ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ–4 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–4(ಬಿ) ಎಂದು ಗುರುತಿಸಲಾಯಿತು. ಸದರಿ ಬಟ್ಟೆ ಮತ್ತು ದಾರಗಳನ್ನು ಈಗ ನೋಡುತ್ತಿದ್ದು, ಈಗಾಗಲೇ ಮುದ್ದೆಮಾಲು 1 ರಿಂದ 5 ಎಂದು ಗರುತಿಸಲಾಗಿದೆ. ಅದೇ ದಿನ ಚಾಸಾ 18 ಮೃತನ ವಿಸರಗಳನ್ನು ಹಾಜರು ಮಾಡಿದ್ದು ಚಾಸಾ 21 ರವರಿಗೆ ಕೊಟ್ಟಿದ್ದೇನೆ. ನನಗೆ ವರ್ಗಾವಣೆ ಆದ ಕಾರಣ ಪ್ರಕರಣವನ್ನು ಚಾಸಾ 21 ರವರಿಗೆ ವಹಿಸಿಕೊಟ್ಟಿದ್ದೇನೆ.

ಫ್ರಾಸಾ 7 ನಿಪಿ–5 ರಂತೆ, ನನ್ನ ಮುಂದೆ ಹೇಳಿಕೆ ನೀಡಿದ್ದಾರೆ.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಕೆ.ಸಿ.ಬಿ ವಕೀಲರಿಂದಃ–**

ಚಾಸಾ 1 ಲಿಖಿತ ದೂರನ್ನು ತಯಾರಿಸಿಕೊಂಡು ಠಾಣೆಗೆ ತಂದಿದ್ದರು. ಚಾಸಾ 1 ಠಾಣೆಗೆ ದೂರು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮುದ್ದೇಮಾಲುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರ ಮರುಹೇಳಿಕೆ ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಅವರ ಹೇಳಿಕೆಯಂತೆ ಪಡೆದಿಲ್ಲ ಎಂದರೆ ಸರಿಯಲ್ಲ.

ಪಿರ್ಯಾದುದಾರರ ವಿರುದ್ಧ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲು ಆಗಿತ್ತು ಎಂದರೆ ನೆನಪಿಲ್ಲ. ಸದರಿ ಪ್ರಕರಣ ಹೆಚ್.ಡಿ ಕೋಟೆ ನ್ಯಾಯಾಲಯದಲ್ಲಿ ವಿಚಾರಣೆ ಆಗಿದೆ ಎಂದರೆ ನೆನಪಿಲ್ಲ. ಈ ಪ್ರಕರಣದಲ್ಲಿ ಯಾವುದೇ ತನಿಖೆ ಮಾಡದೇ ಇದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.